ದಿನಾಂಕಃ 25-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 11 ರವರ ಪರ ಶ್ರೀ ಸಿ ಎಲ್ ಎಂ ವಕೀಲರಿಂದ,

1) ನನ್ನ ತಾತನ ಹೆಸರು ಅಜ್ಜನಾಯಕ ಎಂದರೆ ಸರಿ. ಅಜ್ಜನಾಯಕ ರವರಿಗೆ 4 ಜನ ಮಕ್ಕಳು. ಅವರುಗಳೆಂದರೆ, ಸಣ್ಣಪ್ಪನಾಯಕ, ಕಾಳನಾಯಕ, ಗೌರಮ್ಮ ಮತ್ತು ಕೆಂಪಮ್ಮ ಆಗಿರುತ್ತಾರೆ. ಕಾಳನಾಯಕ ರವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಒಬ್ಬಳು ಹೆಣ್ಣು ಮಗಳು ಎಂದರೆ ಸರಿ. ಸಣ್ಣಪ್ಪನಾಯಕ ರವರಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಗಳು ಎಂದರೆ ಸರಿ. ಕಾಳನಾಯಕ ಮತ್ತು ಸಣ್ಣಪ್ಪನಾಯಕ ರವರ ಮಕ್ಕಳು ಆಸ್ತಿಗಳ ಬಗ್ಗೆ ಮಾಡಿಕೊಂಡಿರುವ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ.

2) ಸರ್ವೇ ನಂ.16/1 ರಲ್ಲಿ 2 ಎಕರೆ 8 ಗುಂಟೆ ವಿಸ್ತೀರ್ಣ ಇದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದ ಪತ್ರವನ್ನು ತಯಾರು ಮಾಡಲು ವಕೀಲರಿಗೆ ಮಾಹಿತಿಯನ್ನು ನಾವೇ ನೀಡಿರುತ್ತೇವೆ. ನನ್ನ ತಂದೆ ಸಮಾರು 30 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಅದೇ ರೀತಿ ಸಣ್ಣಪ್ಪನಾಯಕ ಸಹ 30 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಸರ್ವೇ ನಂ. 16/1 ರಲ್ಲಿರುವ 2 ಎಕರೆ 8 ಗುಂಟೆಯನ್ನು ಸಣ್ಣಪ್ಪನಾಯಕ ರವರ ಮಗ ಸ್ವಾಮಿನಾಯಕ ಮತ್ತು ಕಾಳನಾಯಕ ರವರ ಮಗ ಮಲ್ಲೇಶ ವಿಭಾಗ ಮಾಡಿಕೊಂಡಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ವಾದಿ ಸಂಖ್ಯೆ 3 ಮತ್ತು 4 ರವರು 1 ಎಕರೆ 4 ಗುಂಟೆಯನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3) ಸ್ವಾಮಿನಾಯಕ ಮತ್ತು ಮಲ್ಲೇಶ ರವರಿಗೆ ತಲಾ 1 ಎಕರೆ 4 ಗುಂಟೆಯಂತೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸ್ವಾಮಿನಾಯಕ ರವರು ಸದರಿ ಆಸ್ತಿಯ ಖಾತೆಯನ್ನು ಪ್ರತಿವಾದಿ 5 ರವರಿಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು 4 ನೇ ವಾದಿ ಮತ್ತು ಅವರ ಕುಟುಂಬದವರು ದಿನಾಂಕ 03.05.2006 ರಂದು ಪ್ರತಿವಾದಿ 11 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಇರಬಹುದು ಎಂದು

ನುಡಿಯುತ್ತಾರೆ. ದಾವಾ ಐಟಂ ನಂ. 6 ಆಸ್ತಿಯ ಬಗ್ಗೆ ನನಗೆ ಸಂಬಂಧ ಇರುವುದಿಲ್ಲ. ದಾವಾ ಐಟಂ ನಂ.6 ಆಸ್ತಿಯಲ್ಲಿ ಪ್ರತಿವಾದಿ 11 ರವರು ಸ್ವಾಧೀನ ಇರುತ್ತಾರೆ ಎಂದರೆ ಸಾಕ್ಷಿಯು ಸದರಿ ಆಸ್ತಿಗೂ ನನಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯಲ್ಲಿ ನನಗೆ ಯಾವುದೇ ಭಾಗಾಂಶ ಹಕ್ಕು ಇರುವುದಿಲ್ಲ. ಪ್ರತಿವಾದಿ 11 ರವರಿಗೆ ತೊಂದರೆ ನೀಡುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ